ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2091 |
| ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 25-03-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ತುಮಕೂರು ಜಿಲ್ಲೆಯಲ್ಲಿ ಹಾದು ಹೋಗಿರುವ ತುಮಕೂರು-ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಅಂದಾಜು ಮೊತ್ತ ಎಷ್ಟು; ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು)</td><td>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿರುವಂತೆ ತುಮಕೂರು-ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿಯ (ಹಳೆಯ NH-206) ಚತುಷ್ಪಥ ಯೋಜನೆಯನ್ನು ನಾಲ್ಕು ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡಿದೆ, ಅದರಲ್ಲಿ ಪ್ಯಾಕೇಜ್ -1 ಮತ್ತು ಪ್ಯಾಕೇಜ್-2 ರ ಭಾಗವು ತುಮಕೂರು ಜಿಲ್ಲೆಯ ವ್ಯಾಪ್ತಿಗೆ ಬರುತ್ತದೆ. ವಿವರಗಳು ಕೆಳಕಂಡಂತಿವೆ:-
<table>
<tr><th>Sl .No.</th><th>Name of Project</th><th>Total Length</th><th>Length passes through Tumkur District</th><th>Total Project Cost (TPC) In Cr.</th><th>Project Status</th></tr>
<tr><td>1</td><td>4 laning of Mallasandra to Karadi section of NH-206 (Package-I)</td><td>50.6</td><td>50.6</td><td>1364</td><td>Work has been Completed (PCOD issued).</td></tr>
<tr><td>2</td><td>4 laning of Karadi to Banavara section of NH-206 (Package II)</td><td>56.7</td><td>23.8</td><td>1505</td><td>Progress of work is 95.67%. Out of 56.705 km project length, 53.19 km in completed.<br><br>Further, a length of 23.040 km out of 23.805 km in Tumkur District is completed. Likely date of Project completion:- 30.06.2026</td></tr>
</table></td></tr>
<tr><td>ಆ</td><td>ಈ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಭೂ ಸ್ವಾಧೀನ ಪ್ರಕ್ರಿಯೆಯು ಬಹಳ ಕುಂಠಿತಗೊಂಡಿದ್ದು ಹಾಗೂ ಗುಬ್ಬಿ-ಮಲ್ಲಸಂದ್ರ ಬಳಿ ಅವೈಜ್ಞಾನಿಕವಾಗಿ ರಸ್ತೆ ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಭೂ ಸ್ವಾಧೀನ ಸಮಸ್ಯೆಗಳು, ಸಾರ್ವಜನಿಕ ಪ್ರತಿಭಟನೆ ಮತ್ತು ಮಾನ್ಯ ಹೈಕೋರ್ಟ್‌ನಿಂದ ತಡೆಯಾಜ್ಞೆಯಿಂದಾಗಿ ಯೋಜನೆಯ ಪ್ಯಾಕೇಜ್ 1 ಮತ್ತು 2 ವಿಳಂಬವಾಗಿದೆ. ಪ್ರಸ್ತುತ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (VJNL) ನಿಂದ ಕೆನಾಲ್ ಕ್ರಾಸಿಂಗ್ ಕಾಮಗಾರಿ ಕೆಲಸ ನಡೆಯುತ್ತಿರುವುದರಿಂದ 4 ಸ್ಥಳಗಳಲ್ಲಿ ಮಾರ್ಗ ಬದಲಾವಣೆ ಒದಗಿಸಲಾಗಿದೆ. ಅಲ್ಲದೆ, ಎಂ.ಎಚ್. ಪಟ್ನ ಅಮಾನಿಕೆರೆಯ 1 ಸ್ಥಳದಲ್ಲಿ ಇಎಚ್‌ಟಿ ಟವರ್ ಸ್ಥಳಾಂತರ ಕಾರ್ಯವು ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣದಿಂದಾಗಿ ಬಾಕಿ ಇದೆ.</td></tr>
</table>

| | | |
|---|---|---|
| | | ಗುಬ್ಬಿ-ಮಲ್ಲಸಂದ್ರ ನಡುವಿನ ರಸ್ತೆಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ರಿಯಾಯಿತಿ ಒಪ್ಪಂದದ (Concession Agreement) ನಿಬಂಧನೆಗಳು ಮತ್ತು ಚಾಲ್ತಿಯಲ್ಲಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ರಸ್ತೆಯನ್ನು ನಿರ್ಮಿಸಲಾಗಿದೆ. |
| ಇ | ಸದರಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ಪ್ರಾರಂಭವಾಗಿ ಸುಮಾರು ವರ್ಷ ಕಳೆದರೂ ಸಹ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ; ಕಾಮಗಾರಿಯನ್ನು ಯಾವ ಕಾಲ ಮಿತಿಯೊಳಗೆ ಪೂರ್ಣಗೊಳಿಸಲಾಗುವುದು? | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿರುವಂತೆ ಪ್ಯಾಕೇಜ್-1 ರಲ್ಲಿ ಹೆದ್ದಾರಿ ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಪ್ಯಾಕೇಜ್-2 ರಲ್ಲಿ ತುಮಕೂರು ಜಿಲ್ಲೆಯಲ್ಲಿ ಒಟ್ಟು 23.805 ಕಿ.ಮೀ.ಗಳಲ್ಲಿ 23.040 ಕಿ.ಮೀ. ಉದ್ದವು 28.02.2026 ರಂದು ಪೂರ್ಣಗೊಂಡಿದ್ದು 4 ಅಂತರಗಳಲ್ಲಿ 0.4 ಕಿ.ಮೀ. ಉದ್ದದ ವಿಜೆಎನ್‌ಎಲ್ ಕೆನಾಲ್ ಕ್ರಾಸಿಂಗ್ ಸ್ಥಳಗಳನ್ನು ಹೊರತುಪಡಿಸಿ ಉಳಿದ ಉದ್ದವು ಏಪ್ರಿಲ್-2026 ರೊಳಗೆ ಪೂರ್ಣಗೊಳ್ಳುವ ಸಾಧ್ಯತೆಯಿದೆ. |

ಸಂಖ್ಯೆ: ಲೋಇ 204 ಸಿಏಎಸ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು